ಓ ಎಸ್ ನಂಃ 97/2021
ಡಿ. ಡಬ್ಲ್ಯೂ ಃ 1

ದಿಃ 26.06.2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

ಮುಖ್ಯ ವಿಚಾರಣೆಃ 6ನೆ ಪ್ರತಿವಾದಿ ಪರ ಶ್ರೀ ಜಿ ಎನ್ ವಕೀಲರಿಂದ

ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರಿಕೆ ಸಲ್ಲಿಸಿರುತ್ತೇನೆ. ಅದರಲ್ಲಿರುವ ಎಲ್ಲಾ ವಿಚಾರಗಳು ಸತ್ಯವಾಗಿರುತ್ತದೆ. ಅದರಲ್ಲಿರುವ ಸಹಿ ನನ್ನದೇ ಆಗಿರುತ್ತದೆ. ಸದರಿ ಪ್ರಮಾಣ ಪತ್ರಿಕೆಯನ್ನು ನನ್ನ ಮುಖ್ಯ ವಿಚಾರಣೆ ಎಂದು ತೆಗೆದುಕೊಳ್ಳಬೇಕು ಎಂದು ಕೋರುತ್ತೇನೆ.

ದಿನಾಂಕ ಃ 30.10.1973 ರ ಅಸಲು ನೋಂದಾಯಿತ ವಿಲ್ ನ್ನು ಕೊಟ್ಟಿದ್ದು ಅದನ್ನು ನಿ ಡಿ 2 ಎಂದು, 2 ಎಂ ಆರ್ ನ ದೃಢೀಕೃತ ನಕಲುಗಳನ್ನು ನಿ ಡಿ 3 ಮತ್ತು ನಿ ಡಿ 4 ಎಂದು, ವಂಶವೃಕ್ಷದ ದೃಢೀಕೃತ ನಕಲನ್ನು ಕೊಟ್ಟಿದ್ದು ಅದನ್ನು ನಿ ಡಿ 5 ಎಂದು, ಓ ಎಸ್ 852/2014 ರ ತೀರ್ಪು ಮತ್ತು ಡಿಕ್ರಿಯ ದೃಢೀಕೃತ ನಕಲುಗಳನ್ನು ಕೊಟ್ಟಿದ್ದು ಅವುಗಳನ್ನು ನಿ ಡಿ 6 ಮತ್ತು ನಿ ಡಿ 7 ಎಂದು, ಅಸಲು ದಾವೆ ಸಂಖ್ಯೆ 53/2012 ರ ಡಿಕ್ರಿ ಮತ್ತು ರಾಜಿ ಅರ್ಜಿಯ ದೃಢೀಕೃತ ನಕಲಗಳನ್ನು ಕೊಟ್ಟಿದ್ದು ಅವುಗಳನ್ನು ನಿ ಡಿ 8 ಮತ್ತು ನಿ ಡಿ 9 ಎಂದು, ದಿನಾಂಕ ಃ 18.06.2022 ರ ಕ್ರಯದ ಕರಾರಿನ ರದ್ದಿಯಾತಿ ಪತ್ರವನ್ನು ಕೊಟ್ಟಿದ್ದು ಅದನ್ನು ನಿ ಡಿ 10 ಎಂದು, ಸ್ಟ್ಯಾಂಪ್ ಹಣ ನೀಡಿದ ಬಾಬ್ತು ರಶೀದಿಯನ್ನು ಕೊಟ್ಟಿದ್ದು ಅದನ್ನು ನಿ ಡಿ 11 ಎಂದು ಗುರುತಿಸಲಾಯಿತು. ನೋಂದಾವಣೆಯಾಗದೇ ಇರುವ ಪಾಲು ಪಟ್ಟಿಯನ್ನು ಕೊಟ್ಟಿದ್ದು ಅದನ್ನು ನಿಶಾನೆಗೊಳಿಸಲು ವಾದಿ ಪರ ವಕೀಲರು ಆಕ್ಷೇಪಣೆ ವ್ಯಕ್ತಪಡಿಸಿದ್ದು, ಅದು ಕಡ್ಡಾಯವಾಗಿ ನೋಂದಣಿಯಾಗಬೇಕಾದ ದಾಖಲೆ ಇರುವುದರಿಂದ ನಿಶಾನೆಗೊಳಿಸಲು ತಕರಾರು ಮಾಡಿರುತ್ತಾರೆ. ಪ್ರತಿವಾದಿ ಪರ ವಕೀಲರು ಸ್ಟ್ಯಾಂಪ್ ಡ್ಯೂಟಿ ಕೊಡುವುದಾಗಿ ಹೇಳಿರುತ್ತಾರೆ. ಆದ್ದರಿಂದ ಆ ದಾಖಲೆಯನ್ನು ನಿಶಾನೆಗೊಳಿಸಿರುವುದಿಲ್ಲ.

ಈ ಹಂತದಲ್ಲಿ ಮುಂದುವರೆದ ಮುಖ್ಯ ವಿಚಾರಣೆಗಾಗಿ ವಕೀಲರು ಕಾಲಾವಕಾಶ ಕೋರಿದ್ದು ಮುಂದುವರೆದ ಮುಖ್ಯ ವಿಚಾರಣೆಗಾಗಿ ಮುಂದೂಡಲಾಯಿತು.

(ಉಕ್ತ ಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಓ

ಹಿರಿಯ ಶ್ರೇಣಿ ಸಿವಿಲ್ ನ್ಯಾಯಾಧೀಶರು, ಮಾಗಡಿ